3. ಅಂಚೆದೊಡ್ಡಿ ಏತ ನೀರಾವರಿ ಯೋಜನೆಯು ಪ್ರಗತಿಯಲ್ಲಿರುತ್ತದೆ.

ಈ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

503 (686) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್‌ಗಾಂಧಿ ವಸತಿ ಯೋಜನೆಯಡಿಯಲ್ಲಿ ಸೌಲಭ್ಯವನ್ನು ಪಡೆಯಲಿರುವ ಫಲಾನುಭವಿಗಳ ಪಟ್ಟಿಯನ್ನು ಪೂರ್ಣಗೊಳಿಸಲಾಗಿದೆಯೇ (ಫಲಾನುಭವಿಗಳ ಜಿಲ್ಲಾವಾರು ವಿವರ ನೀಡುವುದು);

ಆ) ವಿವಿಧ ಯೋಜನೆಗಳಡಿಯಲ್ಲಿ ರಾಜ್ಯದ ಎಷ್ಟು ಫಲಾನುಭವಿಗಳಿಗೆ ಪ್ರಸಕ್ತ ಸಾಲಿನಲ್ಲಿ ಮನೆ ಮತ್ತು ನಿವೇಶನಗಳನ್ನು ನೀಡಲು ಸರ್ಕಾರ ಯೋಜನೆ ರೂಪಿಸಿದೆ;

ಇ) ಹಾಗಿದ್ದಲ್ಲಿ, ಯೋಜನೆಗಾಗಿ ಸರ್ಕಾರ ಬಿಡುಗಡೆಗೊಳಿಸಿದ ಹಣದ ಮೊತ್ತ ಎಷ್ಟು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಗ್ರಾಮೀಣ ಹಾಗೂ ನಗರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಜೂನ್ 2003ರಲ್ಲಿ ವಸತಿರಹಿತರ ಮತ್ತು ನಿವೇಶನರಹಿತರ ಸಮೀಕ್ಷೆಯನ್ನು ನಡೆಸಲಾಗಿದ್ದು, ಈ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿರುವ ವಸತಿರಹಿತರ ಹಾಗೂ ನಿವೇಶನರಹಿತರ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಪ್ರದೇಶ	ಒಟ್ಟು ವಸತಿ ರಹಿತರು	ಒಟ್ಟು ನಿವೇಶನ ರಹಿತರು	ಒಟ್ಟ ವಸತಿ ಹಾಗೂ ನಿವೇಶನ ರಹಿತರು
1	ಗ್ರಾಮೀಣ	1226345	1042986	2269331
2	ನಗರ	73444	255827	329271

ಪ್ರತಿವರ್ಷ ನೀಡುತ್ತಿರುವ ಗುರಿಗೆ ಅನುಗುಣವಾಗಿ ಫಲಾನುಭವಿಗಳನ್ನು ಈ ಪಟ್ಟಿಯಿಂದಲೇ ಆಯ್ಕೆ ಮಾಡಲು ಸೂಚಿಸಲಾಗಿರುತ್ತದೆ. ಈ ಪಟ್ಟಿಯಲ್ಲಿ ಹೊಸದಾಗಿ ಅರ್ಹ ಬಿ.ಪಿ.ಎಲ್. ಫಲಾನುಭವಿಗಳನ್ನು ನಿಯಮಾನುಸಾರ ಸೇರ್ಪಡೆಗೊಳಿಸಲು ಮತ್ತು ಗುರಿಗೆ ಅನುಗುಣವಾಗಿ ಫಲಾನುಭವಿಗಳ ಆಯ್ಕೆ ಮಾಡುವ ಸಂದರ್ಭದಲ್ಲಿ ಅನರ್ಹರೆಂದು ಕಂಡು ಬಂದಲ್ಲಿ ಅಂತಹ ಫಲಾನುಭವಿಗಳನ್ನು ಕೈಬಿಡಲು ಅವಕಾಶ ನೀಡಲಾಗಿರುತ್ತದೆ.

ಆ) ರಾಜ್ಯದಲ್ಲಿ 2007–08ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಒಟ್ಟು 5,20,000 ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು ವಿವರಗಳನ್ನು ಈ ಕೆಳಗಿನಂತಿದೆ.

ಕ್ರ.ಸಂ.	ಯೋಜನೆ	2007–08ನೇ ಸಾಲಿನ ಆರ್ಥಿಕ ವರ್ಷದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಮನೆಗಳ ಸಂಖ್ಯೆ
1	ಗ್ರಾಮೀಣ ಆಶ್ರಯ	4,00,000
2	ನಗರ ಆಶ್ರಯ	25,000
3	ಗ್ರಾಮೀಣ ಅಂಬೇಡ್ಕರ್	20,000
4	ಇಂದಿರಾ ಆವಾಸ್ ಯೋಜನೆ	75,000
	ಒಟ್ಟು	**5,20,000**

ಪೂರ್ಣಗೊಳಿಸಲು ಉದ್ದೇಶಿಸಲಾಗಿರುವ ಮನೆಗಳಲ್ಲಿ ಹಿಂದಿನ ಸಾಲಿನಲ್ಲಿ ಅಪೂರ್ಣಗೊಂಡ ಮನೆಗಳು ಸಹ ಸೇರಿರುತ್ತವೆ.

ಕ್ರ.ಸಂ.	ಯೋಜನೆ	2007–08ನೇ ಸಾಲಿನ ಆರ್ಥಿಕ ವರ್ಷದಲ್ಲಿ ಹಂಚಲು ಉದ್ದೇಶಿಸಲಾಗಿರುವ ನಿವೇಶನಗಳ ಸಂಖ್ಯೆ'
1	ನಗರ ನಿವೇಶನ	50,000
2	ಗ್ರಾಮೀಣ ನಿವೇಶನ	50,000
	ಒಟ್ಟು	**1,00,000**

ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಐ.ಹೆಚ್.ಎಸ್.ಡಿ.ಪಿ. ಮತ್ತು ಜೆ.ಎನ್.ಎನ್.ಯು.ಆರ್.ಎಂ. ಯೋಜನೆಗಳಡಿಯಲ್ಲಿ ಈ ಕೆಳಕಂಡಂತೆ ಮನೆಗಳನ್ನು ನಿರ್ಮಿಸಲು ಯೋಜನೆ ರೂಪಿಸಿದೆ. ಆದರೆ ನಿವೇಶನಗಳನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ.

ಐ.ಹೆಚ್.ಎಸ್.ಡಿ.ಪಿ–8348 ಮನೆಗಳು

(ರಾಜ್ಯದ 12 ನಗರ/ಪಟ್ಟಣಗಳಲ್ಲಿ)

ಜೆ.ಎನ್.ಎನ್.ಯು.ಆರ್.ಎಂ–14391 ಮನೆಗಳು

(ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಮಾತ್ರ)

ಇ) 2007–08ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಸರ್ಕಾರದಿಂದ ಬಿಡುಗಡೆಗೊಳಿಸಲಾದ ಅನುದಾನದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.	ಯೋಜನೆ	ಸರ್ಕಾರದಿಂದ ಆಯವ್ಯಯದಲ್ಲಿ ಒದಗಿಸಲಾದ ಅನುದಾನ	ಬಿಡುಗಡೆಗೊಳಿಸಿದ ಹಣ (ರೂ.ಲಕ್ಷಗಳಲ್ಲಿ)
1	ಗ್ರಾಮೀಣ	38590.78	9647.70
2	ಇಂದಿರಾ ಆವಾಸ್ ಯೋಜನೆ	2683.62	663.57
3	ಆಶ್ರಯ ನಿವೇಶನ ಯೋಜನೆ	668.40	0.00
	ಒಟ್ಟು	**41962.80**	**10311.27**

ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಗಳಾದ ಐಹೆಚ್ಎಸ್ಡಿಪಿ ಯೋಜನೆಗೆ ಹಣ ಬಿಡುಗಡೆಯಾಗಿರುವುದಿಲ್ಲ. ಜೆಎನ್ಎನ್ಯುಆರ್ಎಂ ಯೋಜನೆಗೆ ಕೇಂದ್ರ ಸರ್ಕಾರವು ರೂ. 4987.82 ಲಕ್ಷಗಳ ಹಣವನ್ನು ಬಿಡುಗಡೆಗೊಳಿಸಲಾಗಿದೆ.

504 (687) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪೂರ ಅಣೆಕಟ್ಟಿನ ಹಿನ್ನೀರಿನಿಂದ ಹೆಚ್ಚುವರಿ ಪ್ರದೇಶಗಳು ಮುಳುಗಡೆಯಾಗುವುದೇ;

ಆ) ಹಾಗಿದ್ದಲ್ಲಿ, ಮುದ್ದೇಬಿಹಾಳ ತಾಲ್ಲೂಕಿನ ಯಾವ ಯಾವ ಹಳ್ಳಿಗಳು ಹೆಚ್ಚುವರಿಯಾಗಿ ಮುಳುಗಡೆಯಾಗುತ್ತವೆ;